



# ಬಾತುಕೋಳಿ ಹೂ!



18 ವರ್ಷಗಳ ಹಿಂದೆ, ನಾನು ಹೈಸ್ಕೂಲ್ ಹುಡುಗನಾಗಿದ್ದಾಗ ದೊಡ್ಡಮಗ್ಗೆಯ ಹೇಮಾವತಿ ಕ್ವಾರ್ಟ್ರಸ್‌ಗೆ ಹಾಲು ಕೊಡಲು ಹೋಗುತ್ತಿದ್ದೆ. ಈ ಗಿಡವನ್ನು ಅವರ ಬೇಲಿಯಿಂದ ತಂದು ನಮ್ಮನೆ ಬೇಲಿಗೆ ಹಾಕಿದ್ದೆ. ಏಕೆಂದರೆ ನಮ್ಮನೆ ಹೂತೋಟಕ್ಕೆ ತಂತಿ ಬೇಲಿಯಿದ್ದರೂ ಮೇಕೆಗಳು ಸಂದಿಯಲ್ಲಿ ನುಗ್ಗಿ ಗಿಡಗಳನ್ನು ತಿನ್ನುತ್ತಿದ್ದವು. ಈ ಗಿಡ ನೆಟ್ಟ ನಂತರ ಬೇಲಿಗೆ ಹಬ್ಬಿಕೊಂಡು ರಣವಾಗಿ ಬೆಳೆದು ಸಂದಿಯೇ ಇಲ್ಲದಂತೆ ಮಾಡಿತು.

ಈ ಬಳ್ಳಿ ಬಿಡುವ ಹೂ ರಸ್ತೆಯಲ್ಲಿ ಓಡಾಡುವವರನ್ನು ಕೈ ಬೀಸಿ ಕರೆಯುತ್ತದೆ. ಆದರೆ ಈ ಗಿಡಕ್ಕೆ ಎಷ್ಟೊಂದು ಔಷಧಿಯ ಗುಣವಿದೆ ಅಂತ ಗೊತ್ತಾದದ್ದು ಜಿಟಿಆರ್‌ಇಯಲ್ಲಿ ಕೆಲಸ ಸಿಕ್ಕಿ  ಬೆಂಗಳೂರಿಗೆ ಬಂದು ಅಂತರ್‌ಜಾಲದಲ್ಲಿ ಯಾವುದೋ ವಿಷಯ ಹುಡುಕಾಡುವಾಗ! ಈ ಗಿಡದ ಔಷಧೀಯ ಗುಣಗಳು ಅಚ್ಚರಿ ಹುಟ್ಟಿಸುವಂತಿವೆ. ಈ ಹೂಗಳು ರಾತ್ರಿ ಹಾಕಿಕೊಳ್ಳುವ ಟೋಪಿಯ ರೀತಿ ಇದ್ದು, ಹಿಂಬದಿಯಲ್ಲಿ ಕೊಕ್ಕು ಹೊಂದಿರುವುದರಿಂದ ನಾವು ಹಳ್ಳಿಗಳಲ್ಲಿ ಈ ಗಿಡದ ಹೂಗಳಿಗೆ 'ಬಾತುಕೋಳಿ ಹೂ' ಎನ್ನುತ್ತಿದ್ದೆವು.

ಈ ಗಿಡದ ಬೀಜಗಳನ್ನು ಬಿಸಿನೀರಿನಲ್ಲಿ 48 ಗಂಟೆಗಳ ಕಾಲ ನೆನೆಸಿ, ಮಣ್ಣಿನಲ್ಲಿ ಬೀಜಗಳನ್ನು ಹೂತು, ದನದ ಗೊಬ್ಬರ ಹಾಕಿ ಹಗೆ ಹುಯ್ಯಬೇಕು. ಮಣ್ಣು ಒದ್ದೆಯಾಗಿರಬೇಕು, ಹಗೆಗಳಿಗೆ ಸದಾ ನೀರು ಕಟ್ಟಿರಬಾರದು. ಬೀಜ ಹುಟ್ಟುವ ತನಕ ನೆರಳಿನ ಅವಶ್ಯಕತೆಯಿದೆ. ಇವು ಹುಟ್ಟಲು 1 ರಿಂದ 3 ತಿಂಗಳು ಬೇಕು. ಸಸಿಗಳು ಕೈಗೆ ಸಿಗುವಂತಾದಾಗ ಕಿತ್ತು ಪ್ಲಾಸ್ಟಿಕ್ ಕವರ್‌ನಲ್ಲಿ ನೆಟ್ಟು ನೆರಳಿನಲ್ಲಿ ಬೆಳೆಸಿ, ಸ್ವಲ್ಪ ದೊಡ್ಡದಾದ ಮೇಲೆ ಎಲ್ಲಿ ಬೇಕೋ ಅಲ್ಲಿ ನೇರವಾಗಿ ಸೂರ್ಯನ ಬೆಳಕು ಬೀಳುವಂತಹ ಜಾಗದಲ್ಲಿ ನೆಡಬಹುದು.

ಹಿಂದಿನ ಕಾಲದ ಪ್ರೇಮಿಗಳಿಗೆ ಈ ಎಲೆಗಳು ಪ್ರೇಮದ ಸಂಕೇತ ಕೂಡಾ. (ಆಗಿನ ಪ್ರೇಮ ಪತ್ರಗಳಲ್ಲಿ ಹೃದಯದಾಕಾರದ ಚಿತ್ರ ಬರೆದು, ಅದಕ್ಕೆ 45 ಡಿಗ್ರಿ ಕೋನದಲ್ಲಿ ಒಂದು ಬಾಣ ಬಿಡಿಸಿ, ಬಾಣದ ಬಾಲಕ್ಕೆ ಹುಡುಗನ ಹೆಸರನ್ನು ಮತ್ತು ಬಾಣದ ತುದಿಗೆ ಹುಡುಗಿಯ ಹೆಸರನ್ನು ಬರೆಯುತ್ತಿದ್ದರಲ್ಲ! ಈಗ ಮೊಬೈಲ್ ಬಂದ ಮೇಲೆ ಎಸ್‌ಎಂಎಸ್ ಭಾಷೆಯ ಪ್ರವಾಹದಲ್ಲಿ ಈ ಹೂವನ್ನು ನೆನಪಿಸುವ ಪ್ರೇಮಪತ್ರಗಳೆಲ್ಲ ಕಣ್ಮರೆಯಾಗಿವೆ.) ಈ ಹೂವಿಗೆ 'ಬಾಸ್ಕೆಟ್ ಫ್ಲವರ್' ಎಂದೂ ಹೆಸರಿದೆ. ಆದರೆ ಔಷಧಿಯ ಗುಣವಿರುವುದು ಈ ಬಳ್ಳಿಯಲ್ಲಿ. ಈ ಬಳ್ಳಿಯನ್ನು ಈಶ್ವರಿ (ಅರಿಸ್ಟೋಲೋಕಿಯ ಎಲಿಗೆನ್) ಎಂದು ಕರೆಯುತ್ತಾರೆ. ಅರಿಸ್ಟೋಲೋಕಿಯ ಎಲಿಗೆನ್ ವೇಗವಾಗಿ ಬೆಳೆಯುವ ಬಳ್ಳಿ; ಹಬ್ಬಲು ಸೂಕ್ತವಾದ ಮರ ಅಥವಾ ಇನ್ನಾವುದೇ ವಸ್ತು ಸಿಕ್ಕಿದರೆ ಸಾಕು–10 ರಿಂದ 15 ಅಡಿಗಳಷ್ಟು ಬೆಳೆಯುತ್ತದೆ.

ಒಣ ಪ್ರದೇಶ, ಉಷ್ಣ ಪ್ರದೇಶ ಮತ್ತು ಅತೀ ಶೀತದ ಪ್ರದೇಶದಲ್ಲೂ, ಸೂರ್ಯನ ಬೆಳಕಿನಲ್ಲೂ ಮತ್ತು ನೆರಳಿನಲ್ಲೂ ಬೆಳೆಯುವುದು ಇದರ ವಿಶೇಷ. ಈ ಬಳ್ಳಿಯ ಮೂಲ ಅಮೆರಿಕ ಮತ್ತು ಬ್ರೆಜಿಲ್. ಆಯುರ್ವೇದ  ತಜ್ಞರ ಪ್ರಕಾರ, ಈ ಬಳ್ಳಿಯ ಬೇರನ್ನು ಹಾವು, ಚೇಳು ಇನ್ನಿತರ ವಿಷಜಂತುಗಳು ಕಚ್ಚಿದಾಗ ವಿಷ ತೆಗೆಯಲು ಬಳಸುತ್ತಾರೆ. ಹೆಂಗಸರ ತಿಂಗಳ ಹೊಟ್ಟೆನೋವು, ಅಜೀರ್ಣ, ತೊನ್ನು, ಚರ್ಮ-ರೋಗಕ್ಕೂ ಇದರ ಬೇರು ಮದ್ದಾಗಿರುವಂಥದು. ಮಲಬದ್ಧತೆ ನಿವಾರಣೆಗೆ ಈ ಬಳ್ಳಿಯ ಎಲೆಯನ್ನು ಬಳಸುತ್ತಾರೆ.